# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| ಸಿ.ಸಿ. ನಂಬರ್ | : 161/2024 |
| ಸಿ.ಡಬ್ಲ್ಯೂ | : 18 |
| ಪಿ.ಡಬ್ಲ್ಯೂ | : 09 |
| ಸಾಕ್ಷಿಯ ಹೆಸರು | : ಶ್ರೀಧರ ವಿ ಪಾಟೀಲ |
| ವಯಸ್ಸು | : 60 ವರ್ಷ |
| ಉದ್ಯೋಗ | : ಎ ಎಸ್ ಐ, ನವಲಗುಂದ ಪೊಲೀಸ ಠಾಣೆ |
| ವಾಸ ಸ್ಥಳ | : ನವಲಗುಂದ |

ದಿನಾಂಕಃ 05/12/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನಾನು ಸಪ್ಟೆಂಬರ್-2019 ರಿಂದ ಇಲ್ಲಿಯವರೆಗೆ ASI ಎಂದು ನವಲಗುಂದ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 14-12-2020 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಬಂದು ಮ.02.30 ಗಂಟೆಗೆ ಗಣಕೀಕೃತ ದೂರನ್ನು ಸಲ್ಲಿಸಿದ ಆಧಾರದ ಮೇಲೆ ಠಾಣಾ ಗುನ್ನಾ ಸಂಃ144/2020 ನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ದಿನಾಂಕಃ 15-12-2020 ರಂದು ಅಪಘಾತ ಸ್ಥಳಕ್ಕೆ ತೆರಳಿ ಚಾಸಾ-2 ಮತ್ತು 3 ರವರ ಸಮಕ್ಷಮ ಬೆ.08.30 ರಿಂದ 09.30 ಗಂಟೆಯವರೆಗೆ ಪಂಚನಾಮೆ ಪೂರೈಸಿರುತ್ತೇನೆ. ಸದರಿ ದಿನ ಚಾಸಾ-1 ರವರ ಪುರವಣಿ ಹೇಳಿಕೆ, ಚಾಸಾ-8 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅಪಘಾತ ಪಡಿಸಿದ ವಾಹನವನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೇನೆ. ಚಾಸಾ-1 ರವರ ಮೋಟಾರ ಸೈಕಲ್ ನ್ನು ಚಾಸಾ-6 ಮತ್ತು 7 ರವರ ಸಮಕ್ಷಮ ಪಂಚನಾಮೆ ಪೂರೈಸಿ ಜಪ್ತಿಪಡಿಸಿಕೊಂಡಿರುತ್ತೇನೆ. ನಂತರ ದಿನಾಂಕಃ 15-12-2020 ರಂದು ಚಾಸಾ-8 ರಿಂದ

14 ರವರ ಪುರವಣಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ದಿನ ಯಾಂತ್ರಿಕ ಪರೀಕ್ಷೆಯ ಕುರಿತು ಚಾಸಾ-17 ರವರಿಗೆ ಪತ್ರ ಬರೆದಿದ್ದು, ನಂತರ ದಿನಾಂಕಃ 20-12-2020 ರಂದು ಮ.01.00 ಗಂಟೆಗೆ 1 ನೇ ಆರೋಪಿ ಠಾಣೆಗೆ ಹಾಜರಾಗಿದ್ದು, ಅವನನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 30-12-2020 ರಂದು 2 ನೇ ಆರೋಪಿಯನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 01-01-2021 ರಂದು ಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಮೋಟಾರ ಸೈಕಲ್ ನ್ನು ಅದರ ಮಾಲೀಕರಿಗೆ ನಷ್ಟಭರ್ತಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 23-01-2021 ರಂದು ಗಾಯಾಳುಗಳ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ-19 ರವರಿಗೆ ವಹಿಸಿದ್ದು, ಸದರಿಯವರು ನಂತರ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಸಾಕ್ಷಿಯು 1 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-1(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು 2 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-2(ಸಿ)** ಎಂದು ಗುರುತಿಸಲಾಯಿತು. ಮೋಟಾರ ಸೈಕಲ್ ಜಪ್ತಿ ಪಂಚನಾಮೆಯನ್ನು **ನಿಪಿ-7** ಮತ್ತು **8** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-7(ಎ) ಮತ್ತು 8(ಎ)** ಎಂದು ಗುರುತಿಸಲಾಯಿತು. ಛಾಯಾಚಿತ್ರಗಳನ್ನು **ನಿಪಿ-9** ಮತ್ತು **10** ಎಂದು ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರಗಳನ್ನು **ನಿಪಿ-11** ಮತ್ತು **ನಿಪಿ-12** ಎಂದು ಗುರುತಿಸಲಾಯಿತು. ಎಂ ವಿ ವರದಿಯನ್ನು **ನಿಪಿ-13** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-13(ಎ)** ಎಂದು ಗುರುತಿಸಲಾಯಿತು. ಇಂಡಿಮ್ ನಿಟಿ ಬಾಂಡ್ ಗಳನ್ನು **ನಿಪಿ-14** ಮತ್ತು **15** ಹಾಗೂ ಸಾಕ್ಷಿಯ ಸಹಿಗಳನ್ನು **ನಿಪಿ-14(ಎ)** ಮತ್ತು **15(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ವಿ ಎಂ ವಕೀಲರಿಂದ**

ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ದೂರು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಮೊದಲಿಗೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ನಮ್ಮ ಠಾಣೆಗೆ ಬಂದಿರುತ್ತಾರೆ. ಚಾಸಾ-1 ರವರು

ಮ.12.00 ಗಂಟೆಗೆ ಠಾಣೆಗೆ ಬಂದಿರುತ್ತಾರೆ. ಸದರಿಯವರು ನಮ್ಮ ಠಾಣೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ತಾವೇ ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ಪ್ರಯಾಣಿಸುತ್ತಿದ್ದ ಮೋಟಾರ ಸೈಕಲ್ ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯವಾಗಲು ಹಾಗೂ ಅಪಘಾತದಿಂದ ಪರಿಹಾರ ಸಿಗಲು ಸುಳ್ಳು ಪ್ರಕರಣ ದಾಖಲಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಅವುಗಳನ್ನು ಠಾಣೆಯಲ್ಲೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**